## ಶ್ವಾಸಕೋಶ ಕ್ಷಯದ ಲಕ್ಷಣಗಳು

- ಕಫ ಸಹಿತ ಕೆಮ್ಮು 2 ವಾರಕ್ಕಿಂತ ಹೆಚ್ಚು.
- ಸಂಜೆಯ ವೇಳೆ ಜ್ವರ.
- ರಾತ್ರಿ ವೇಳೆ ಬೆವರುವುದು
- ಕೆಮ್ಮಿದಾಗ ಎದೆನೋವು.
- ಕಫದಲ್ಲಿ ರಕ್ತ ಬೀಳುವುದು.
- ಹಸಿವಾಗದಿರುವುದು.
- ತೂಕ ಕಡಿಮೆ ಆಗುವುದು.

## ಶ್ವಾಸಕೋಶೇತರ ಕ್ಷಯ: ಲಕ್ಷಣಗಳು

- ರಸ ಗ್ರಂಥಿಗಳ ಕ್ಷಯ: ಕುತ್ತಿಗೆ ಊತ, ಕೀವು ಸುರಿತ/ ಸುರಿತ ಇಲ್ಲದಿರುವುದು.
- ಮೆದುಳು ಕ್ಷಯ (ಟಿ.ಬಿ. ಮನೆಂಜೈಟಿಸ್): ತಲೆನೋವು, ಜ್ವರ–ಮಂಪರು, ಮಾನಸಿಕ ಅಸ್ವಸ್ಥತೆ, ಕುತ್ತಿಗೆ ಗಟ್ಟಿಯಾಗುವುದು.
- ಬೆನ್ನು ಹುರಿಯ ಕ್ಷಯ: ಬೆನ್ನುನೋವು, ಜ್ವರದ ಜೊತೆಗೆ ಬೆನ್ನು ಹುರಿಯ ಊತ.
- ಮೂಳೆ ಕ್ಷಯ: ತೂಕ ಕಳೆದುಕೊಳ್ಳುವುದು



ಹೋರಾಟ ನಡೆಸಿದರೆ, ನಮ್ಮ ದೇಶ – ನಮ್ಮ ರಾಜ್ಯ ಕ್ಷಯಮುಕ್ತವಾಗುತ್ತದೆ. ಅಂದಹಾಗೆ, ಕ್ಷಯರೋಗಿಗಳಿಗೆ ಆತ್ಮೀಯತೆಯನ್ನು ತೋರಿಸುವುದು, ಅವರೊಂದಿಗೆ ಪ್ರೀತಿಯನ್ನು ಹಂಚಿಕೊಳ್ಳುವುದು ಅಗತ್ಯ. 'ಕ್ಷಯರೋಗವನ್ನು ದೂರವಿರಿಸಿ, ರೋಗಿಯನ್ನಲ್ಲ' ಎನ್ನುವುದು ಆಂದೋಲನದ ಸೂತ್ರಗಳಲ್ಲೊಂದು.

### ಕ್ಷಯ ನಿರ್ಮೂಲನೆ: ಸಾಧನೆ ಅಪಾರ, ಸಾಧಿಸಬೇಕಿರುವುದು ಇನ್ನೂ ಇದೆ

ಕಳೆದ 5 ಹಂತಗಳಲ್ಲಿ ಕರ್ನಾಟಕದಲ್ಲಿ 3 ಕೋಟಿ 33,45,000 (ಪುನಾರಾವರ್ತಿ ತಪಾಸಣೆಯನ್ನು ಒಳಗೊಂಡು) ಜನರನ್ನು ಮನೆಮನೆಗೆ ಭೇಟಿನೀಡಿ, ರೋಗ ಲಕ್ಷಣಗಳಿಗಾಗಿ ತಪಾಸಣೆ ನಡೆಸಲಾಗಿದೆ. 2 ಲಕ್ಷದ 91 ಸಾವಿರದ 191 ಜನರನ್ನು ಪರೀಕ್ಷೆಗೆ ಒಳಪಡಿಸಿದಾಗ, ಅವರಲ್ಲಿ 9 ಸಾವಿರದ 300 ಮಂದಿಗೆ ಕ್ಷಯರೋಗವಿರುವುದು ಪತ್ತೆಯಾಗಿದೆ. ರಾಜ್ಯದ ಈ ಸಾಧನೆ ದೇಶದ ಇತರ ರಾಜ್ಯಗಳಿಗೆ ಮಾದರಿಯಾಗಿದೆ.

ಈ ಹಿಂದಿನ ಆಂದೋಲನಗಳಲ್ಲಿ ಒಂದೂ ಕ್ಷಯರೋಗ ಪ್ರಕರಣ ಪತ್ತೆಯಾಗದ ಪ್ರದೇಶಗಳಲ್ಲಿ ಸಮಗ್ರವಾಗಿ ಆ ಇಡೀ ಸಮುದಾಯಗಳನ್ನೇ ಕ್ಷಯರೋಗದ ಲಕ್ಷಣಗಳಿಗಾಗಿ ತಪಾಸಣೆ ಮಾಡಲಾಗುತ್ತಿದೆ. ಇದನ್ನು 'ತೀವ್ರ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನ' ಎನ್ನುತ್ತಾರೆ.

ಕಳೆದ ಹಂತಗಳಲ್ಲಿ ನಡೆದ ಆಂದೋಲನದಿಂದ ಹಲವು ಕಲಿಕೆಗಳು ಸಾಬೀತಾದವು. ವ್ಯವಸ್ಥೆ ಕೇಂದ್ರಿತವಾದ ಆರೋಗ್ಯ ಸೇವೆಗಳು ಸಮುದಾಯದತ್ತ ಚಲಿಸುವುದು ಪರಿಣಾಮಕಾರಿ ಮಾರ್ಗ. ಇದು ಉತ್ತಮ ಫಲಿತಾಂಶ ನೀಡುತ್ತದೆ ಎಂಬ ತಿಳಿವಳಿಕೆಗೆ ಬಲಬಂದಿತು. ಎಲ್ಲಕ್ಕಿಂತ ಹೆಚ್ಚಾಗಿ ಸಮುದಾಯಗಳಿಗೂ ಹಾಗೂ ಅವರಿಗೆ ಸೇವೆ ನೀಡುವವರಿಗೂ ಇರುವ ಅಂತರ ಆಂದೋಲನಗಳಿಂದ ಕಡಿಮೆಯಾಯಿತು. ಸಂಘಟಿತ ಮತ್ತು ಸಂಯೋಜಿತ ಪ್ರಯತ್ನಗಳು, ಮಾಧ್ಯಮದ ಬೆಂಬಲ, ವೈದ್ಯಕೀಯ ಕಾಲೇಜುಗಳು, ಖಾಸಗಿ ವೈದ್ಯರು, ಭಾರತೀಯ ವೈದ್ಯರ ಸಂಘದಂಥಾ ಸಂಸ್ಥೆಗಳ ಸಕ್ರಿಯ ಪಾಲ್ಗೊಳ್ಳುವಿಕೆ, ವಿವಿಧ ಇಲಾಖೆಗಳ ನಡುವಣ ಸಹಕಾರ ಆಂದೋಲನದ ಯಶಸ್ವಿನಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಕಳೆದ ವರ್ಷಗಳಲ್ಲಿ ನಡೆದ ಆಂದೋಲನಗಳ ಮುಖಾಂತರ ಕಲಿತ ಪಾಠಗಳನ್ನು ಈ ವರ್ಷದ ಆಂದೋಲನದಲ್ಲಿ ಬಳಸಿಕೊಳ್ಳಲಾಗುತ್ತದೆ.

ಸಕ್ರಿಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನವು ಕ್ಷಯರೋಗ ನಿರ್ಮೂಲನೆಗೆ ಸಂಬಂಧಿಸಿದಂತೆ ಹಲವು ನೂತನ ಅವಕಾಶಗಳನ್ನು ತೆರೆದಿದೆ. ಈ ಎಲ್ಲ ಅವಕಾಶಗಳ ನಂತರ 'ಮುಂದೇನು?' ಎಂಬ ಪ್ರಶ್ನೆಗೆ ಉತ್ತರ: 'ಹೆಚ್ಚಿನ ಹುಡುಕಾಟ, ಹೆಚ್ಚು ಪತ್ತೆ, ಮತ್ತು ಶೀಘ್ರಚಿಕಿತ್ಸೆ'. ವಿವಿಧ ಇಲಾಖೆಗಳ ಸಂಯೋಜಿತ ಮತ್ತು ಸಂಘಟಿತ ಪ್ರಯತ್ನ, ಆರೈಕೆ ಮತ್ತು ಚಿಕಿತ್ಸಾ ಬದ್ಧತೆ ಹಾಗೂ ಪೌಷ್ಟಿಕ ಆಹಾರ ಪೂರೈಕೆ ಮತ್ತು ಬೆಂಬಲ ಚಟುವಟಿಕೆಗಳಿಗೆ ಮಹತ್ವ ನೀಡಬೇಕಾಗಿದೆ.

### ನಿರ್ಮೂಲನೆಯ ಹೊಸ್ತಿಲಲ್ಲಿ...

ಕ್ಷಯರೋಗವೆಂಬ ಸಾರ್ವಜನಿಕ ಆರೋಗ್ಯ ಸಮಸ್ಯೆ, ನಿರ್ವಹಣೆ ಮತ್ತು ನಿಯಂತ್ರಣದ ಹಂತಗಳನ್ನು ದಾಟಿ ನಿರ್ಮೂಲನೆಯ ಹಂತವನ್ನು ತಲುಪಿದೆ. ಇದು ಕ್ಷಯರೋಗದ ನಿವಾರಣೆ ಬಗ್ಗೆ

## ನೆಮ್ಮದಿ ಮತ್ತು ನಿಟ್ಟುಸಿರು

ಬೆಳಗಾವಿಯ ಪುಟ್ಟ ಹಳ್ಳಿಯೊಂದರ ಆ ತಾಯಿ ಮಾತನಾಡುವಾಗ ಆಕೆಗೆ ಗಂಟಲುಬ್ಬಿ ಬರುತ್ತಿತ್ತು. ಆ ತಾಯಿ ನೆಲವನ್ನು ದಿಟ್ಟಿಸುತ್ತ ಬಿಟ್ಟು ಬಿಟ್ಟು ಮಾತನಾಡುತ್ತಿದ್ದಳು.

'ನಮ್ಮ ಹುಡುಗನ್ನ ಕಳಕೊಂಡ್ವಿ ಅಂತಿದ್ವಿರಿ ಸರ್ರ. ನಮಗ್ಯಾರಿಲ್ರಿ. ಮನೆ ಮನೆಗೆ ಬಂದ ಈ ಆಸ್ಪತ್ರೆಯವರು ದೇವರು ಬಂದ್ಹಂಗೆ ಬಂದರ್ರಿ. ತಪಾಸಣೆ ಮಾಡಿ ಪರೀಕ್ಷೆ ಮಾಡಿ ಔಷಧಿ ಕೊಟ್ಟದ್ರಿಂದ ಹುಡುಗ ಬದುಕ್ದ ರೀ.'

ಆ ಹೆಣ್ಣುಮಗಳ ಮಾತುಗಳನ್ನು ಕೇಳುತ್ತ, 'ಸಮುದಾಯಕ್ಕೆ ಅನುಕೂಲವಾದ ಇಂಥದೊಂದು ಆಂದೋಲನ ಬಹಳ ಹಿಂದೆಯೇ ಬಂದಿದ್ದರೆ ಚೆನ್ನಾಗಿತ್ತು. ಕಳಕೊಂಡ ಎಷ್ಟೋ ಮಂದಿಯನ್ನ ಉಳಿಸಿಕೊಳ್ಳಬಹುದಿತ್ತೇನೋ' ಎಂದು ರಾಯಚೂರಿನ 'ಹೊಸಬೆಳಕು' ಸಂಘದ ರಾಮಯ್ಯ ಉದ್ಗರಿಸುತ್ತಾರೆ. ಹೀಗೆ ಹೇಳುವಾಗ ಅವರ ದನಿ ವಿಷಾದ ಮತ್ತು ಸಮಾಧಾನಗಳ ನಡುವೆ ತೂಗಾಡುತ್ತಿತ್ತು. ಸಕ್ರಿಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನದ ಪ್ರಾತಿನಿಧಿಕ ದನಿಗಳಿವು.